## ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್. ಸಿ. ನ್ಯಾಯಾಲಯ ಬೇಲೂರು.

---

**ಅಸಲು ದಾವಾ ನಂ : 176/2021** **ದಿನಾಂಕ : 17-07-2023**
**ಪಿ.ಡಬ್ಲ್ಯೂ : 1**

---

**:ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು:**

*******

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಾದ ಶ್ರೀ ಎಡಿಸಿ ರವರಿಂದ:-**

ಈ ದಾವೆಯನ್ನು ಯಾರು ಯಾರ ವಿರುದ್ದ ಯಾವ ಪರಿಹಾರ ಕೋರಿ ದಾಖಲಿಸಿದ್ದಾರೆ ಎಂದು ನನಗೆ ಗೊತ್ತು. ವಾದಿ ನನ್ನ ತಾಯಿ ಆಕೆ ದಾವಾ ದಾಖಲಿಸಿದ ನಂತರ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ನನ್ನ ತಾಯಿಗೆ ಬಿಪಿ ಸಕ್ಕರೆ ಖಾಯಿಲೆ ಮತ್ತು ಮಂಡಿ ನೋವು ಇರುತ್ತದೆ. ನನ್ನ ತಾಯಿಗೆ ಮಂಡಿ ನೋವು ಇದ್ದು ತಿರುಗಾಡಲು ಆಗುವುದಿಲ್ಲ ಎಂದು ವೈದ್ಯರ ಪ್ರಮಾಣ ಪತ್ರ ಹಾಜರು ಮಾಡಿಲ್ಲ ಮುಂದೆ ಮಾಡುತ್ತೇನೆ. ಮನೆಯ ಹತ್ತಿರ ದನ ಮತ್ತು ಕುರಿಗಳನ್ನು ಮೇಯಿಸಲು ನನ್ನ ತಾಯಿ ಓಡಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಯಾವುದೇ ತೊಂದರೆ ಇಲ್ಲದಿದ್ದರು ಆಕೆಯನ್ನು ನ್ಯಾಯಾಲಯಕ್ಕೆ ಬರದಂತೆ ಮಾಡಿ ಅಧಿಕಾರ ಪತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

**2.** ನೆಟ್ಟೆಕೆರೆಯ ಸರ್ವೆ ನಂ. 90 ರ ಆಸ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆ ಡಿಕ್ರಿಗಾಗಿ ದಾವೆಯನ್ನು ದಾಖಲಿಸಿರುತ್ತೇನೆ. ಸರ್ವೆ ನಂ. 90 ರಲ್ಲಿ ಒಟ್ಟು 34 ಎಕರೆ ಜಮೀನು ಇರುತ್ತದೆ. 34 ಎಕರೆ ಜಮೀನಿನಲ್ಲಿ ಯಾರು ಯಾರು ಸ್ವಾಧೀನದಲ್ಲಿ ಇರುತ್ತಾರೆ ಎಂದು ಗೊತ್ತಿಲ್ಲ, ಸದರಿ 34 ಎಕರೆ ಜಮೀನಿನ ಚೆಕ್ಕು ಬಂದಿ ಗೊತ್ತಿಲ್ಲ. ದಾವಾ ಆಸ್ತಿಯ ಚೆಕ್ಕು ಬಂದಿ ಪೂರ್ವಕ್ಕೆ ಕೇಶವಮ್ಮ, ಪಶ್ಚಿಮಕ್ಕೆ ಜಯದೇವೆಗೌಡ, ಉತ್ತರಕ್ಕೆ ದ್ಯಾವಮ್ಮ, ದಕ್ಷಿಣಕ್ಕೆ ಉಳಿಕೆ ಸರ್ಕಾರಿ ಗೋಮಾಳ. ನಾನು ಹೇಳಿದ್ದು ನಾನು ಸ್ವಾಧೀನದಲ್ಲಿರುವ ಆಸ್ತಿಯ ಚೆಕ್ಕುಬಂದಿ. ನಮ್ಮ ಜಮೀನು ಸರ್ವೆ ನಂ. 90 ರ ಒಟ್ಟು ಕ್ಷೇತ್ರದ ಪೈಕಿ ದಕ್ಷಿಣ ದಿಕ್ಕಿಗೆ ಬರುತ್ತದೆ. ಸರ್ವೆ ನಂ. 90 ರಲ್ಲಿ 2 ಎಕರೆ 8 ಗುಂಟೆ ಗೋಮಾಳ ಜಮೀನು ಇರುತ್ತದೆ. ಸದರಿ ಗೋಮಾಳ ಜಮೀನಿನ ಚೆಕ್ಕುಬಂದಿ ಗೊತ್ತಿಲ್ಲ.

**3.** ದಾವಾ ಆಸ್ತಿಯನ್ನು ನನ್ನ ತಾಯಿ ವಾದಿಯವರು ಮಾಶಪ್ಪರವರಿಂದ ಕ್ರಯಕ್ಕೆ ಕೊಂಡಿರುತ್ತಾರೆ. ಸದರಿ ಮಾಶಪ್ಪನವರಿಗೆ ಸದರಿ ಆಸ್ತಿ ಅವರ ಅಜ್ಜನಿಂದ ಬಂದಿರುತ್ತದೆ. ಈ ಬಗ್ಗೆ ನಾನು ಕೈಬರಹದ ಪಹಣಿಯನ್ನು ಹಾಜರು ಮಾಡಿರುತ್ತೇನೆ. ದಾವಾ ಆಸ್ತಿಯ ಜಮೀನು ಪೋಡಾಗಿರುವುದಿಲ್ಲ. ಸರ್ವೆ ನಂ. 90/2 2 ಎಕರೆ ಜಮೀನು ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ. ಸರ್ವೆ ನಂ. 90 ರಲ್ಲಿ 34 ಎಕರೆ ಜಮೀನಿನ ಪೈಕಿ ನಮ್ಮ ಜಮೀನು ಯಾವುದು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನೆಟ್ಟೆಕೆರೆಯ ಸುಬ್ಬೆಗೌಡರು ಸದರಿ 34 ಎಕರೆ ಜಮೀನಿನ ಪೈಕಿ 2 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 34 ಎಕರೆ ಪೈಕಿ 2 ಎಕರೆ ಗೋಮಾಳ ಜಮೀನಿನಲ್ಲಿ ಸುಬ್ಬೆಗೌಡರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಮಂಜೂರು ಮಾಡುವಂತೆ ಸುಬ್ಬೆಗೌಡರು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯ ಮೇರೆಗೆ

ಗ್ರಾಮಲೆಕ್ಕಾಧಿಕಾರಿ ಮತ್ತು ರಾಜಸ್ವ ನಿರೀಕ್ಷಕರು ಹಲವಾರು ವರ್ಷಗಳಿಂದ ಸುಬ್ಬೆಗೌಡರು ಸದರಿ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದು ಹಾಗೂ ಸದರಿ ಜಮೀನು ಮಂಜೂರು ಮಾಡಬಹುದು ಎಂದು ವರದಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸುಬ್ಬೆಗೌಡರು ಹಾಲಿ ಸದರಿ ಜಮೀನಿನಲ್ಲಿ ಮುಸುಕಿನ ಜೋಳ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಗೋಮಾಳ ಜಮೀನಿನ ನಕಾಶೆಯು ಮತ್ತು ಚೆಕ್ಕು ಲೀಸ್ಟ್ ಸಹ ಪ್ರತಿವಾದಿಯ ತಂದೆ ಸುಬ್ಬೆಗೌಡರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ 50 ವರ್ಷಗಳಿಂದ ಅವರ ಜಮೀನಿನಲ್ಲಿ ಸ್ವಾಧೀನದಲ್ಲಿದ್ದು ಉಳುಮೆ ಮಾಡುತ್ತಿದ್ದರು ನಾನೇ ಅವರಿಗೆ ತೊಂದರೆ ನೀಡಿದ್ದು ಅವರು ಎಂದಿಗೂ ನನಗೆ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಎಂದಿಗೂ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸ್ವಾಧೀನದಲ್ಲಿ ಇರದ ಕಾರಣ ದಾವಾ ಪರಿಹಾರಕ್ಕೆ ನಾನು ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ. 34 ಎಕರೆ ಜಮೀನಿನಲ್ಲಿ ನಮಗೆ ಸೇರಿದ ಜಮೀನು ಯಾವುದು ಎಂದು ನನಗೆ ತಿಳಿಯದೆ ಪ್ರತಿವಾದಿ ತಂದೆಯ 2 ಎಕರೆ ಜಮೀನು ನಮ್ಮ ಜಮೀನು ಎಂದು ಸುಳ್ಳು ಮಾಹಿತಿ ನೀಡಿ ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-21 ರಿಂದ 26 ರ ಪೋಟೋಗಳನ್ನು ಬೇರೆ ಯಾವುದೋ ಜಮೀನಿನಲ್ಲಿ ತೆಗೆಸಿ ಅದನ್ನೇ ದಾವಾ ಜಮೀನು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ಇದೇ ಜಮೀನಿಗೆ ಸಂಬಂಧಿಸಿದಂತೆ ಪುಟ್ಟಲಕ್ಷ್ಮಮ್ಮ ಎಂಬುವವರು ಓಎಸ್ ನಂ. 206/2023 ರ ಒಂದು ದಾವೆಯನ್ನು ಇದೇ ಪ್ರತಿವಾದಿ ವಿರುದ್ಧ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪುಟ್ಟಲಕ್ಷ್ಮಮ್ಮ ನನಗೆ ಗೊತ್ತಿಲ್ಲ. ಸದರಿ ಪುಟ್ಟಲಕ್ಷ್ಮಮ್ಮನವರು ಸರ್ವೆ ನಂ. 90 ರ ಪೈಕಿ ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ**

(ಪ್ರಸನ್ನಕುಮಾರ್ ಪಿ.)
**ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ. ಎಂ. ಎಫ್. ಸಿ. ಬೇಲೂರು.**